# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 657 (676) |
| ಸದಸ್ಯರ ಹೆಸರು | : | ಶ್ರೀ. ಪಿ.ಹೆಚ್. ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ 10 ಗ್ರಾಮಗಳಾದ ಬಿಸನಾಳಕೊಪ್ಪ, ಇದ್ದಲಗಿ, ಕಮದತ್ತ, ಅಡಿಹಾಳ, ಅನಕಪಟ್ಟಿ ಕೆಸರಪೆಂಟೆ, ವರಗೋಡದಿನ್ನಿ, ಕೆಂಗಲ್ ಕಡಪಟ್ಟಿ, ಖಜಗಲ್, ಎಮ್ಮೆಟ್ಟಿ ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗಿರುವುದು ನಿಜವೇ; | ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ 10 ಗ್ರಾಮಗಳು ನಾರಾಯಣಪುರ ಜಲಾಶಯದ ಹಿನ್ನೀರಿನ ಸಮೀಪದಲ್ಲಿದ್ದರಿಂದ, 2005 ಆಗಸ್ಟ ರಲ್ಲಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಮಳೆಯಾಗಿ ಪ್ರವಾಹ ಬಂದ ಸಮಯದಲ್ಲಿ ಬಾಧಿತವಾಗಿರುತ್ತವೆ. |
| (ಆ) | ಸದರಿ ಪುನರ್ವಸತಿ ಕೇಂದ್ರಗಳಲ್ಲಿ ಸಂತ್ರಸ್ತರಿಗೆ ಪುನರ್ವಸತಿಗೆಂದು ಒಂದು ಗುಂಟೆ ಅಳತೆಯ ಒಟ್ಟು 15,500 ವಸತಿ ನಿವೇಶನಗಳನ್ನು ನಿರ್ಮಿಸಿ, ಸಂತ್ರಸ್ತರ ಕುಟುಂಬಗಳಿಗೆ ತಲಾ ಒಂದರಂತೆ ಒಟ್ಟು 3,460 ನಿವೇಶನ ಹಂಚಿಕೆಯಾಗಿ ಇನ್ನೂ 12,200 ಗಿಂತ ಹೆಚ್ಚು ವಸತಿ ನಿವೇಶನಗಳು ಖಾಲಿ ಉಳಿದಿರುವುದು ನಿಜವೇ; | ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ 01 ಗ್ರಾಮಕ್ಕೆ 01 ಪುನರ್ವಸತಿ ಕೇಂದ್ರವನ್ನು ನಿರ್ಮಾಣ ಮಾಡಿ 1,241 ವಸತಿ ನಿವೇಶನಗಳನ್ನು ಹಾಗೂ ಹುನಗುಂದ ತಾಲೂಕಿನ 12 ಗ್ರಾಮಗಳಿಗೆ 12 ಪುನರ್ವಸತಿ ಕೇಂದ್ರಗಳನ್ನು ನಿರ್ಮಾಣ ಮಾಡಿ 15,290 ವಸತಿ ನಿವೇಶನಗಳನ್ನು ರಚಿಸಲಾಗಿದೆ.<br><br>Social Economic Survey (SES) ಪ್ರಕಾರ, 4,154 ಸಂಖ್ಯೆಯ ಅರ್ಹ ಸಂತ್ರಸ್ಥರಿದ್ದು, ಸುಮಾರು 11,136 ಸಂಖ್ಯೆಯ ನಿವೇಶನಗಳು ಖಾಲಿ ಉಳಿದಿರುತ್ತವೆ. |
| (ಇ) | ಯಾವುದೇ ಒಂದು ನಿವೇಶನದಲ್ಲಿ ಸಂತ್ರಸ್ತ ಕುಟುಂಬ ತಗಡಿನ ಸೆಡ್ಡು ಕಟ್ಟಿ ವಾಸಿಸುತ್ತಿದ್ದರೆ ಅದಕ್ಕೆ ಹೊಂದಿಕೊಂಡಂತೆ 4 ನಿವೇಶನಗಳು ಖಾಲಿ ಉಳಿದಿದ್ದು, ಅವುಗಳಲ್ಲಿ ಮುಳ್ಳುಕಂಟಿಗಳು ಬೆಳೆದು, ವಿಷಜಂತುಗಳ ಹಾವಳಿಗಳು ಹೆಚ್ಚಾಗಿ, ಇಡೀ ಪುನರ್ವಸತಿ ಕೇಂದ್ರಗಳೇ ವಾಸಿಸಲು ಅಯೋಗ್ಯವಾಗಿವೆ ಎಂದು ಸುಮಾರು ವರ್ಷಗಳಿಂದ ತಕರಾರು ತೆಗೆದು ಸಮಸ್ಯೆ ಪರಿಹರಿಸಲು ಸರ್ಕಾರಕ್ಕೆ ಒತ್ತಾಯಿಸುತ್ತಾ ಬಂದಿದೆಯೇ; | ಸಂತ್ರಸ್ಥ ಕುಟುಂಬಗಳ ತಗಡಿನ ಶೆಡ್‌ಗೆ ಹೊಂದಿಕೊಂಡಂತೆ ಇರುವ ಖಾಲಿ ನಿವೇಶನಗಳಲ್ಲಿ ಬೆಳೆದಿದ್ದ ಮುಳ್ಳು ಕಂಟಿಗಳನ್ನು ತೆರವುಗೊಳಿಸುವ ಪ್ರಸ್ತಾವನೆಗೆ ಅಗತ್ಯ ಅನುಮೋದನೆ ಪಡೆದು ಶೀಘ್ರವಾಗಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಈ) | ನೀಡಲಾದ ಒಂದು ಗುಂಟೆಯ ನಿವೇಶನದಲ್ಲಿ ಜಾನುವಾರು ಸಾಕಾಣಿಕೆಗೆ ಕೊಟ್ಟಿಗೆ ನಿರ್ಮಾಣ, ಕೃಷಿ ಸಲಕರಣೆ, ಹೊಟ್ಟು ಮೇವು ಸಂಗ್ರಹಣೆ ಹಾಗೂ ದವಸದಾನ್ಯ ಸಂಗ್ರಹಣೆಗೆ ಯಾವುದಕ್ಕೂ ಸಾಕಾಗದೇ ಇರುವ ಕಾರಣ ಈಗ ಹಂಚಿಕೆ ಮಾಡಿರುವ ತಲಾ ಒಂದು ಗುಂಟೆ ನಿವೇಶನಗಳಿಗೆ ಹೆಚ್ಚುವರಿಯಾಗಿ 3 ಗುಂಟೆಯಷ್ಟು ನಿವೇಶನ ಹಂಚಿಕೆ ಮಾಡಬೇಕೆಂದು ಕಳೆದ 20 ವರ್ಷಗಳಿಂದ ಸಂತ್ರಸ್ತರು ಆಗ್ರಹಿಸಿ ಬಂದಿದ್ದಾದರೂ ಸಮಸ್ಯೆಗೆ ಪರಿಹಾರ ದೊರಕಿಲ್ಲದ ಕಾರಣಕ್ಕಾಗಿ ಕಳೆದ 6 ತಿಂಗಳುಗಳಿಂದ ಇದ್ದಲಗಿ ಪುನರ್ವಸತಿ ಕೇಂದ್ರದಲ್ಲಿ ಅಹೋರಾತ್ರಿ ಸತ್ಯಾಗ್ರಹ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂತ್ರಸ್ತರ ಈ ಸಮಸ್ಯೆಗಳಿಗೆ ಪರಿಹಾರ ನೀಡಲಾಗಿದೆಯೇ; ಯಾವ ಕಾಲಮಿತಿಯಲ್ಲಿ ನೀಡಲಾಗುವುದು? | ಗಮನಕ್ಕೆ ಬಂದಿದೆ.<br><br>ಸರ್ಕಾರದ ಆದೇಶ ದಿನಾಂಕ 04.01.2007 ಹಾಗೂ ದಿನಾಂಕ 25.09.2010 ರನ್ವಯ ಮುಖ್ಯ ಕುಟುಂಬಗಳಿಗೆ ಮಾತ್ರ ಅನ್ವಯವಾಗುವಂತೆ, ವ್ಯವಸಾಯ ಮಾಡುತ್ತಿರುವ ಹಾಗೂ ದನಕರುಗಳನ್ನು ಸಾಕಿ ಹೈನುಗಾರಿಕೆ ಮಾಡುವವರಿಗೆ 10 ಚ.ಮೀ. ಅಳತೆಯ ತಿಪ್ಪೆ ಜಾಗವನ್ನು, ಪುನರ್ವಸತಿ ಕೇಂದ್ರದಲ್ಲಿ ಹಂಚಿಕೆಯಾದ ಮನೆ ನಿವೇಶನ ಹೊರತುಪಡಿಸಿ ಉಚಿತವಾಗಿ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪ್ರಕ್ರಿಯೆ ಜಾರಿಯಲ್ಲಿದೆ.<br><br>ಸಂತ್ರಸ್ಥರ ಬೇಡಿಕೆಯ ಕುರಿತಂತೆ ಪುನರ್‌ವಸತಿ ಪುನರ್ ನಿರ್ಮಾಣದ ನಿಯಮಾವಳಿಗಳ ಅಡಿಯಲ್ಲಿ ಪರಿಶೀಲಿಸಲಾಗುವುದು. |

ಸಂಖ್ಯೆ:ಜಸಂಇ 79 ಡಬ್ಲ್ಯೂಬಿಎಂ 2026

(ಎಸ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು